# ದೀವಟಿಗೆ ದೀಪಾವಳಿ

■ ಚಿತ್ರ, ಬರಹ:
ಕೆ.ಪಿ.ಲಕ್ಷ್ಮೀಕಾಂತರಾಜೇ ಅರಸ್





ದೀಪಾವಳಿ ಎಂದರೆ ಮಕ್ಕಳಿಂದ ಮುದುಕರವರೆಗೆ ಉಲ್ಲಾಸ. ಮೈ – ಮನಗಳಿಗೆ ಚೈತನ್ಯ. ಕಣ್ಣುಗಳಿಗೆ ದೃಶ್ಯ ವೈಭವವನ್ನು ಹರಿಸಿ, ಬೆಳಕಿನ ಸ್ವರ್ಗವನ್ನೇ ಧರೆಗಿಳಿಸುವ ಹಬ್ಬ. ಸಾಂಪ್ರದಾಯಿಕ ಪೂಜೆಗಳು ಒಂದೆಡೆಯಾದರೆ, ಮದ್ದು ಸಿಡಿಮದ್ದಿನ ಆರ್ಭಟ ಇನ್ನೊಂದೆಡೆ. ಇವುಗಳ ನಡುವೆ ಬೆಳಕಿನ ಹಬ್ಬವನ್ನು ಬೆಳಕಿನ ಆರಾಧನೆಯಿಂದಲೇ ಆಚರಿಸುವ ವಿಶಿಷ್ಟ ಪದ್ಧತಿಯೂ ಕೆಲವೆಡೆ ಇದೆ.

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ, ಬೆಟ್ಟದ–ತುಂಗ, ಕುಡುಕೂರು ಗ್ರಾಮಗಳ ಸುತ್ತಮುತ್ತಲ ಗ್ರಾಮಗಳಲ್ಲಿ ಇಂತಹ ಆಚರಣೆ ಜಾರಿಯಲ್ಲಿದೆ. ಅದುವೇ ದೀವಟಿಗೆ ದೀಪಾವಳಿ. ಅದನ್ನು ನೋಡಲು ಎರಡು ಕಣ್ಣುಗಳು ಸಾಲವು.

ಬಲಿಪಾಡ್ಯಮಿಯ ದಿನ ಸಾವಿರಾರು ಜನರು ಕೈಯಲ್ಲಿ ಉರಿಯುವ ದೀವಟಿಗೆ (ಪಂಜು)ಗಳನ್ನು ಹಿಡಿದು ಸುಮಾರು 20 ಕಿ.ಮೀ. ದೂರ ಮೆರವಣಿಗೆಯೋಪಾದಿಯಲ್ಲಿ ಸಾಗುವ ರೀತಿಯೇ ವಿಭಿನ್ನ, ವಿಶಿಷ್ಟ. ಹೀಗೆ ದೀವಟಿಗೆ ಹಿಡಿದು ಸಾಗುವವರ ಬೇಡಿಕೆಗಳನ್ನು ಸಿಡ್ಲು ಮಲ್ಲಿಕಾರ್ಜುನಸ್ವಾಮಿ ಈಡೇರಿಸುತ್ತಾನೆ ಎಂಬ ನಂಬಿಕೆ ಈ ಭಾಗದ ಜನರಲ್ಲಿ ಇದೆ. ಜನರ ಕಷ್ಟಗಳ ನಿವಾರಣೆಗಾಗಿ ದೀವಟಿಗೆ ಹಿಡಿದು ಸಾಗುವ ಹರಕೆಯನ್ನು ಭಕ್ತರು ಹೊರುತ್ತಾರೆ. ಪ್ರತಿ ವರ್ಷ ಇಲ್ಲಿ ದೀವಟಿಗೆ ಹಿಡಿದು ಸಾಗುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಬೆಟ್ಟದಪುರ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ದೀವಟಿಗೆ ಸೇವೆ ಹೆಸರಿನಲ್ಲಿ ದೀಪಾವಳಿ ಆಚರಿಸುವ ಪರಿಪಾಠ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಬೆಟ್ಟದ ಮೇಲೆ ಸಿಡ್ಲು ಮಲ್ಲಿಕಾರ್ಜುನಸ್ವಾಮಿ ದೇವಾಲಯವಿದೆ. ಈ ಹಿಂದೆ ವಿಜಯಗಿರಿ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ಈ ಬೆಟ್ಟದ ಮೇಲೆ ಮಲ್ಲಿಕಾರ್ಜುನಸ್ವಾಮಿ ನೆಲೆಗೊಂಡನಂತೆ. ಈ ಪ್ರದೇಶವನ್ನು ಆಳುತ್ತಿದ್ದ ಚೆಂಗಳ ರಾಜರು ಮಲ್ಲಿಕಾರ್ಜುನಸ್ವಾಮಿ ಉತ್ಸವವನ್ನು ಆಚರಣೆ ಆರಂಭಿಸಿದರು ಎಂಬ ಐತಿಹ್ಯವಿದೆ.

ಬಲಿಪಾಡ್ಯಮಿ ದಿನ ಮಧ್ಯಾಹ್ನದ ವೇಳೆಗೆ ಉರಿಯುವ ದೀವಟಿಗೆಗಳನ್ನು ಹಿಡಿದ ನೂರಾರು ಭಕ್ತರು ಉತ್ಸವಕ್ಕೆ ಚಾಲನೆ ನೀಡುತ್ತಾರೆ. ಖುರ್ಜು ಎಂದು ಕರೆಯುವ ಮರದ ಮಂಟಪಗಳಲ್ಲಿ ಭ್ರಮರಾಂಭದೇವಿ, ಮಲ್ಲಿಕಾರ್ಜುನಸ್ವಾಮಿ, ಹಾಗೂ ಬೆಳ್ಳಿ ಬಸಪ್ಪನ ಉತ್ಸವ ಮೂರ್ತಿಗಳನ್ನು ಹೊತ್ತು ಮೆರವಣಿಗೆಯಲ್ಲಿ ಹೊರಡುತ್ತಾರೆ.

(54ನೇ ಪುಟ ನೋಡಿ)